ಶ್ರೀ ಗೋಪಾಲ ನಾಲೆನ್ನ.—ಲೆಫ್ಟ್‌ಹ್ಯಾಂಡ್‌ನವರಿಗೆ ಬೇರೆ ರೈಟ್‌ಹ್ಯಾಂಡ್‌ನವರಿಗೆ ಬೇರೆ ಬೇರೆ ಕೇಳುತ್ತಾರೆಂದು ಹೇಳುತ್ತೀರಿ, ಅಸ್ಪೃಶ್ಯತಾ ನಿವಾರಣಾ ಕಾನೂನನ್ನು ಜಾರಿಮಾಡಿ ಅಂಥವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಕಷ್ಟದ ಕೆಲಸ. ಒಂದು ನಿದರ್ಶನವನ್ನು ಹೇಳುತ್ತೇನೆ. ಅರಸೀಕೆರೆಯ ಹತ್ತಿರ ಒಂದು ಹಳ್ಳಿ ಇದೆ, ಅಲ್ಲಿ ಒಂದು ಬಾವಿಯನ್ನು ಅರ್ಧ ತೆಗೆದಿದ್ದೇವೆ, ಅದು ರೈಟ್‌ಹಾಂಡ್‌ನವರಿಗಿವ ಕಡೆ ಎಂದು ಲೆಫ್ಟ್‌ಹ್ಯಾಂಡಿನವರು ಅದು ಬೇಡವೆಂದು ಹೇಳುತ್ತಾರೆ. ಮಧ್ಯೇ ತೆಗೆದಿದ್ದರೂ ಅದರಿಂದ ಬೆರಕೆಯಾಗುತ್ತದೆ, ಬೇಡವೆಂದು ಹೇಳಿ ಅಲ್ಲಿ ಯಾರೂ ನೀರನ್ನು ತೆಗೆದುಕೊಳ್ಳದೆ ಕೆರೆಯಿಂದ ನೀರು ತರುತ್ತಿದ್ದಾರೆ. ಯಾರು ಬೇಕಾದರೂ ಆ ಬಾವಿಯಿಂದ ನೀರು ತೆಗೆದ ಕೊಳ್ಳಲು ಅಡ್ಡಿ ಇಲ್ಲವೆಂದು ನಾವು ಹೇಳುತ್ತಿದ್ದೇವೆ. ಆದರೆ ಬಾವಿಯನ್ನು ತೆಗೆಯದೇ ಯಿರುವ ಹಾಗೆ ತೊಂದರೆ ಮಾಡುತ್ತಿದ್ದಾರೆ.

ಶ್ರೀ ಪಿ. ಎಂ. ದೇವ್.—ಎಡಗೈ ಮತ್ತು ಬಲಗೈ ಎಂಬ ತಾರತಮ್ಯ ತೆಗೆದುಹಾಕಲು ಏನಾದರೂ ಯೋಜನೆ ಮಾಡಿದ್ದಾರೆಯೇ ? ಅದು ಯಾವ ಘಟ್ಟಕ್ಕೆ ಬಂದಿದೆ ?

1-00 P.M.

ಶ್ರೀಮತಿ ಯಶೋಧರ ದಾಸಪ್ಪ.—ಈಗಾಗಲೇ ಜನರಲ್ ಹಾಸ್ಟೆಲ್ ಮಾಡಿ ಎಲ್ಲರಿಗೂ ಪ್ರವೇಶ ಕೊಟ್ಟಿದೆ. ಈ ತಾರತಮ್ಯ ತೆಗೆದುಹಾಕುವುದಕ್ಕೆ ಜನ ಮುಂದೆ ಬಂದರೆ ಅದಕ್ಕಿಂತ ನಂತೋಷದ ವಿಚಾರ ಬೇರೆ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಸ್ಪೃಶ್ಯತೆ ನಿವಾರಣೆಯಾಗಬೇಕು ಎಂದು ಹೇಳುತ್ತೀರಿ. ಆದರೆ ಬೇರೆ ಬಾವಿ ತೆಗೆಸಿಕೊಟ್ಟು ನೀರು ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಇದು ಒಂದಕ್ಕೊಂದು ಸಂಬಂಧವಿಲ್ಲ. ಅಸ್ಪೃಶ್ಯತಾ ನಿವಾರಣಾ ಕಾನೂನನ್ನು ತೆಗೆದುಹಾಕಿ. ಇಲ್ಲದಿದ್ದರೆ ಕಾಮನ್ ವೆಲ್ಸ್ ಇರಬೇಕೆಂದು ಕಾನೂನು ಮಾಡಿ. ಒಂದು ಖಚಿತ ನಿರ್ಧಾರ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಒಂದು ಹಳ್ಳಿಗೆ ಒಂದೇ ಬಾವಿ ಇರಬೇಕು ಎಂದು ಮಾಡಬೇಕು. ಈಗ ಕಾನೂನು ಇದ್ದರೂ ಹಳ್ಳಿಗಳಲ್ಲಿ ಅದು ಅನುಷ್ಠಾನಕ್ಕೆ ಬರುತ್ತಾ ಇಲ್ಲ. ಇದಕ್ಕೆ ಪರಿಹಾರ ತಾವೇ ಹೇಳಬೇಕು. ಸರಕಾರ ಏನುಬೇಕಾದರೂ ಮಾಡಲು ಸಿದ್ಧವಿದೆ. ಕಾನೂನು ಇದ್ದರೂ ಅದನ್ನು ಉಲ್ಲಂಘಿಸಲಾಗುತ್ತಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬಾವಿ ತೆಗೆಯಿಸಿ ಇವರ ಕೊಡದಿಂದ ನೀರು ತೆಗೆಯುವುದು ಅವರ ಕೊಡದಿಂದ ನೀರು ತೆಗೆಯುವುದು ಎಂಬ ತಾರತಮ್ಯ ತೆಗೆದುಹಾಕಲು, ಎಲ್ಲಿ ಇಲೆಕ್ಟ್ರಿಕ್ ಕರೆಂಟ್ ಇದೆಯೋ ಅಲ್ಲಿ ಇಲೆಕ್ಟ್ರಿಕ್ ಪೋಟಾರ ಕೂಡಿಸಿ ನಲ್ಲಿ ಇಟ್ಟು ಬಾವಿಯಿಂದ ನೀರು ಪಡೆಯುವುದಕ್ಕೆ ಸರಕಾರ ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ?

Mr. SPEAKER.—It is a suggestion for consideration.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಎಡಗೈ ಹಾಗು ಬಲಗೈ ತಿಕ್ಕಾಟ ಇದೆ; ಬಾವಿಗಳು ಆಗುವುದಿಲ್ಲ ಎಂದು ಹೇಳಿದಿರಿ. ಹಾಗಾದರೆ ಸರಕಾರಕ್ಕೆ ಇದುವರೆಗೆ ಬಾವಿಗಳು ಬೇಡ ಎಂದು ಅಂಥಾ ತಕರಾರುಗಳು ಎಷ್ಟು ಬಂದಿದೆ ?

ಶ್ರೀಮತಿ ಯಶೋಧರ ದಾಸಪ್ಪ.—ಡೀಟೇಲ್ಸ್ ಬೇಕಾದರೆ ಒದಗಿಸುತ್ತೇನೆ.

ಶ್ರೀ ಕೆ. ಪಿ. ದೇವಣ್ಣಸಿದ್ದಪ್ಪ.—ಯಾವ ಮಂತ್ರಿಯಾದರೂ ಟೂರ್ ಮೇಲೆ ಹೋದಾಗ್ಗೆ ಇಂಥ ಬಾವಿ ವ್ಯಾಜ್ಯ ಫೈನಲು ಮಾಡಿದ್ದಾರೆಯೇ ?

ಶ್ರೀ ಎಂ. ಪಿ. ಕೃಷ್ಣಪ್ಪ.—ನಾಲ್ಕೈದು ಕಡೆ ನಾನು ಮಾಡಿದ್ದೇನೆ.

———

Formation of a Committee at the District level in Hassan District for the collection of Defence Funds.

*Q.—286. Sri H. R. KESHAVA MURTHY (Gandasi).—

Will the Government be pleased to state :—

(*a*) whether it has come to their notice that a Committee has been formed at the District level in Hassan District for the collection of Defence Funds ;

(SRI H. R. KESHAVA MURTY)

(*b*) whether the accounts of funds collected are sent to the Chief Minister or any other authority regularly by the President;

(*c*) whether they have received any complaints, that individual receipts have not been issued as and when funds are collected by the Committee ?

A.—Sri M. V. KRISHNAPPA (Minister for Revenue) [on behalf of SRI S. NIJALINGAPPA (Chief Minister)].—

(*a*) Yes.

(*b*) Yes. The accounts are being sent to the Joint Secretary N. D. F., Bangalore regularly.

(*c*) there was one complaint alleged against Revenue Inspector of Hallimysore Hobli. On enquiry, it was found that the Revenue Inspector had credited the amount so collected and had issued receipts.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹಾನನ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹಣ ವಸೂಲಾಗಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಡಿಸ್ಟ್ರಿಕ್ಟಿನ ಟೋಟಲ್ ಹಣ ಎಷ್ಟು ಎಂಬುದು ಗೊತ್ತಿದೆ. ಆದರೆ ತಾಲ್ಲೂಕ್‌ವೈಸ್ ಅಂಕಿಸಂಖ್ಯೆಯಲ್ಲಿ ಇಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕಮಿಟಿಗೆ ಸದಸ್ಯರನ್ನು ಕೋ-ಆಪ್ಟ ಮಾಡಿಕೊಂಡಿದ್ದಾರೆ. ಹೀಗೆ ಕೋ-ಆಪ್ಟ ಮಾಡಲು ಅಧಿಕಾರವಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೋ-ಆಪ್ಟ್ ಮಾಡಲು ಅಧಿಕಾರ ಇದೆ. ಅದರಿಂದ ಉತ್ಪತ್ತಿ ಜಾಸ್ತಿ ಯಾಗಿದೆ. ಆದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಬಿ. ಭಾನ್ಕರಶೆಟ್ಟಿ.—ಎನ್. ಡಿ. ಎಫ್. ಕಲೆಕ್ಷನ್ ಹಣ ಎಷ್ಟು ದಿವಸಗಳವರೆಗೆ ಅವರು ಇಟ್ಟುಕೊಳ್ಳಬಹುದು?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯವಾಗಿ ತಿಂಗಳು ತಿಂಗಳಿಗೆ ಜಿಲ್ಲಾಕೇಂದ್ರಕ್ಕೆ ಕಳಿಸಿಕೊಡುತ್ತಾರೆ. ಇಷ್ಟೇ ದಿನ ಇಟ್ಟುಕೊಳ್ಳಬೇಕು ಎಂದು ಏನಿಲ್ಲ. ಎಳೆಂಟುದಿನ ಇಟ್ಟುಕೊಂಡು ಜಿಲ್ಲಾ ಮಟ್ಟಕ್ಕೆ ಕಳಿಸುತ್ತಾರೆ, ಅಲ್ಲಿಂದ ಸ್ಟೇಟ್ ಲೆವೆಲ್ಲಿಗೆ ಬರುತ್ತದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಹಾನನ ಡಿಸ್ಟ್ರಿಕ್ಟ್ ನ್ಯಾಷನಲ್ ಡಿಫೆನ್ಸ್ ಕಮಿಟಿ ಎಷ್ಟುನಲ ಸಭೆ ಸೇರಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಐದುನಲ ಸಭೆ ಸೇರಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಕಂಪ್ಲೇಂಟ್ ಬಂದಿದೆ ಎಂದು ಹೇಳಿದ್ದೀರಿ. ಆ ರೆವೆನ್ಯೂ ಇನ್‌ಸ್ಪೆಕ್ಟರ್ ಎಷ್ಟು ಹಣ ವಸೂಲ್ಮಾಡಿ ಇಟ್ಟುಕೊಂಡಿದ್ದರು, ಮತ್ತು ಎಷ್ಟು ದಿನಗಳ ಮೇಲೆ ಡಿಪಾಜಿಟ್ ಮಾಡಿದರು?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂಪ್ಲೇಂಟ್ ಬಂದಮೇಲೆ ಹಣ ಕೊಟ್ಟಿದ್ದಾರೆ ಎಂದು ಉತ್ತರ ಹೇಳಿಲ್ಲ. ಕಂಪ್ಲೇಂಟ್ ಬಂದಮೇಲೆ ತಕ್ಷಣ ಎನ್‌ಕ್ವಾಯರಿ ಮಾಡಲಾಯಿತು. ಹಣ ವಸೂಲ್ಮಾಡಿ ತಕ್ಷಣ ರಿಸೀಟ್ ಕೊಟ್ಟಿದ್ದರು. ಆದರೆ ಶ್ಯಾನುಭೋಗರು ಪಾರ್ಟಿಗೆ ರಸೀದಿ ತಲುಪಿಸಿರಲಿಲ್ಲ. ಶ್ಯಾನುಭೋಗರನ್ನು ಕರೆಸಿ ರೈತರಿಗೆ ರಸೀದಿ ಕೊಡಿಸಿದ್ದಾರೆ.

ಶ್ರೀ ಲಿಂಗಡಿ ಬನ್ನಬನಪ್ಪ.—ಇದಕ್ಕೆ ಸಂಬಂಧಪಟ್ಟ ಅಕೌಂಟ್ಸ್ ಆಡಿಟ್ ಮಾಡಿಸಿದ್ದೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಆಡಿಟ್ ಮಾಡಿದೆ. ಒಬ್ಬ ಐ. ಎ. ಎಸ್. ಆಫೀಸರ್ ಅನ್ನು ಹಾಕಿದ್ದೇವೆ. ಅವರು ರಿಸೀಟ್ ಬುಕ್ಸ್ ಚೆಕ್‌ಮಾಡಿ ಆಡಿಟ್‌ಮಾಡಿಕೊಂಡು ಬರುತ್ತಾರೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಊರೂರಿಗೆ ಡಿಫೆನ್ಸ್‌ಫಂಡ್ ವಸೂಲ್ಮಾಡಿ ಒಟ್ಟುದುಡ್ಡಿಗೆ ರಿಸೀಟ್ ಕೊಟ್ಟಿದ್ದಾರೆ. ಆದರೆ ಇಂಡಿವಿಜುಅಲ್ ರಿಸೀಟ್ ನೂರಾರು ಗ್ರಾಮಗಳಲ್ಲಿ ಕೊಟ್ಟಿಲ್ಲ ಎಂಬುದಕ್ಕೆ ದೂರು ಬಂದಿದೆಯೇ? ಇದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಏನಾದರೂ ಇದ್ದರೆ ಕಾಗದ ಬರೆದು ತಿಳಿಸಿರಿ. ಆದರೆ ಸಾಮಾನ್ಯವಾಗಿ ಒಂದು ಗ್ರಾಮದ ಎಲ್ಲ ರಿಸೀಟುಗಳನ್ನು ಶಾನುಭೋಗರಿಗೆ ಕೊಡುತ್ತಾರೆ. ಶ್ಯಾನುಭೋಗ ಪಟೇಲರು ಇಂಡಿವಿಜ್ಯುಯಲ್ ರಿಸೀಟ್ ತೆಗೆದುಕೊಂಡು ಹೋಗಿ ಪ್ರತಿಯೊಬ್ಬರಿಗೆ ಕೊಡುತ್ತಾರೆ. ರಿಸೀಟ್ ಕೊಟ್ಟಿದ್ದರೆ ಏನೂ ತೊಂದರೆ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಊರಿನಲ್ಲಿ ಒಬ್ಬ ಪಟೇಲರು ಆಫೀಸಿನಲ್ಲಿ ರೆಸೀಟು ಇರುವಾಗ, ಅನ್‌ಆಥರೈಸ್ಡ್ ರೆಸೀಟು ಕೊಟ್ಟದ್ದನ್ನು ತಮ್ಮ ಗಮನಕ್ಕೆ ತಂದಾಗ ಏನು ಆಕ್ಷನ್ ತೆಗೆದು ಕೊಂಡಿರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇಶವಮೂರ್ತಿಗಳ ಕೊಶ್ಚನ್ನು ಹಾಸನ ಜಿಲ್ಲೆಗೆ ಸಂಬಂಧಪಟ್ಟದ್ದು. ಆದ್ದರಿಂದ ಆ ಜಿಲ್ಲೆಗೆ ಸಂಬಂಧಪಟ್ಟದ್ದನ್ನು ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಕೆ. ಪಿ. ದೇವಣ್ಣಸಿದ್ದಪ್ಪ.—ಯಾವ ಖಾಸಗಿ ಮುಖಂಡರು ಹೋದರೂ ಎನ್. ಡಿ. ಎಫ್. ಎಫ್. ಎಸ್· ಮಾಡುತ್ತಾ ಇದ್ದಾರೆ ಎಂದು ಹೇಳುತ್ತಿದ್ದಾರೆ. ಕೇಶವಮೂರ್ತಿಯಂಥ ಅನೇಕಜನ ಮುಖಂಡರು ಸರಕಾರದ ಗಮನಕ್ಕೆ ತಂದರೂ ನಿಗಾ ಕೊಡುತ್ತಿಲ್ಲ. ಸರಕಾರ ಮುಂದೆ ಏನಾದರೂ ನ್ಯಾಯವಾಗಿ ನಡೆದುಕೊಂಡರೆ ಕಲೆಕ್ಷನ್ ಬರುತ್ತದೆ. ಇಲ್ಲದೆ ಅಲ್ಲಲ್ಲಿ ಮುಖಂಡರೇ ತಿಂದು ಹಾಕುವುದಾದರೆ ಕಲೆಕ್ಷನ್ ಸಿಲ್ಲಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ದೇಶದ ರಕ್ಷಣಾ ಫಂಡಿಗೆ ಮೈಸೂರಿನಲ್ಲಿ 3ಕೋಟಿ 31 ಲಕ್ಷ ರೂಪಾಯಿ ವಸೂಲಾಗಿದೆ. ಬಹುಶಃ ನಮಗೆ ಬಂದ ಕಂಪ್ಲೇಂಟ್ಸು ಬಹಳ ಕಡಮೆ. ಇನ್ನು ಯಾವುದಾದರೂ ಫಂಡಿಗೆ ಹಣ ವಸೂಲು ಮಾಡಿದ್ದರೆ ನೂರಾರು ದೂರುಗಳು ಬರುತ್ತಿದ್ದುವು. ಜನಗಳು ಬಹಳ ದೇಶಭಕ್ತಿಯಿಂದ ಹಣವನ್ನು ವಸೂಲುಮಾಡುತ್ತಿದ್ದಾರೆ, ರಕ್ಷಣಾನಿಧಿಗೆ. ಡಿಫೆನ್ಸ್ ಕಲೆಕ್ಷನ್ನಿನಲ್ಲಿ ಮಿಸ್‌ಅಪ್ರೊಪ್ರಿಯೇಷನ್ ಆಥವಾ ಮಿಸ್‌ಯೂಸ್ ನಡೆದಿಲ್ಲ. ಎಲ್ಲಯಾದರೂ ಇಂಡಿವಿಜ್ಯುಯಲ್ ರಸೀತಿ ಕೊಡುವುದಕ್ಕೆ ಬದಲಾಗಿ ಗ್ರಾಮಕ್ಕೆ ಒಟ್ಟಾಗಿ ರಸೀತಿಗಳನ್ನು ಕೊಟ್ಟಿರುತ್ತಾರೆ.

ಶ್ರೀ ಬಿ. ಎಲ್. ಗೌಡ.—ಯಾರು ಹಣ ಕೊಡುತ್ತಾರೋ ಅವರಿಗೆ ರಸೀತಿಕೊಡಬೇಕಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ಯಾನುಭೋಗ ಪಟೇಲ ವಸೂಲಿ ಮಾಡಿದಾಗ ಅವನಿಗೇ ಕೊಡುತ್ತಾರೆ. ಲಂಪ್‌ಸಮ್ ರಸೀತಿ ಗ್ರಾಮಕ್ಕೆ ಕೊಟ್ಟಾಗ, ಅವರು ವಸೂಲುಮಾಡಿಕೊಡಬೇಕು, ರಸೀತಿ ಬರೆಸಿ ಕೊಡಬೇಕು.

ಶ್ರೀ ಎಚ್.ಆರ್.ಕೇಶವ ಮೂರ್ತಿ.—ಕೆಲವು ಹಳ್ಳಿಗಳಲ್ಲಿ ಅಧಿಕಾರಿಗಳು ವೈಯಕ್ತಿಕ ದ್ವೇಷವನ್ನು ಇಟ್ಟುಕೊಂಡು ರೈತರನ್ನು ಹಿಂಸೆಮಾಡಿ ಅವರ ಒಡವೆಗಳನ್ನು ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ? ಇವತ್ತಿನವರೆಗೂ ಅವರು ಕಳೆದುಕೊಂಡಿರುವುದು ಹಿಂದಕ್ಕೆ ಬಂದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಬರೆಯಿರಿ, ಅಂಥ ಸೀರಿಯಸ್ ಕೇಸುಗಳು ಇದ್ದರೆ. ಅದು ಆಕ್ಷಮ್ಯ ಅಪರಾಧವಾಗುತ್ತದೆ. ದೇಶದ ಹೆಸರಿನಲ್ಲಿ ಅದನ್ನು ಮಾಡಬಾರದು. ಈ ರೀತಿ ಮಾಡಿದ್ದರೆ ಸರಕಾರದ ಗಮನಕ್ಕೆ ತನ್ನಿ. ತಾವು ಬರೆದ ಒಂದು ಅಧಿಕಾರಿಯ ಬಗ್ಗೆ ವಿಚಾರಣೆ ಮಾಡಿದಾಗ, ಹಳೆ ಮೈಸೂರು ರೆವಿನ್ಯು ಇನ್‌ಸ್ಪೆಕ್ಟರು ರಸೀತಿ ಕೊಟ್ಟಿದ್ದರು. ಅದು ಶ್ಯಾನುಭೋಗರ ಹತ್ತಿರ ಇತ್ತು.

———

School-going Children covered by-*CARE* Mid-Day Meal Scheme In The State.

*Q.—264. Sri S. RAJAGOPAL (Kolar Gold Fields).—

Will the Government be pleased to state :—

(*a*) the total number of school-going children covered by CARE Mid-day Meal Scheme in the State (District-war);

(*b*) The details of the organisation proposed to set up to successfully implement the scheme?